

# ಪಾರ್ಟಿ ವೇರ್; ತಯಾರಿ ಜೋರು

ಜಗಮಗಿಸುವ ಪಾರ್ಟಿಯಲ್ಲಿ ನೀವು ಸುರಸುಂದರಿಯ ಹಾಗೇ ಮಿಂಚುಬೇಕು ಎಂದುಕೊಂಡಿದ್ದರೆ, ಈ ರೀತಿಯ ಉಡುಪುಗಳನ್ನು ಆಯ್ಕೆ ಮಾಡಿಕೊಳ್ಳಿ. ಇದರಿಂದ ಪಾರ್ಟಿಯಲ್ಲಿ ಎಲ್ಲರ ಕಣ್ಣು ನಿಮ್ಮ ಮೇಲೆ ಇರುತ್ತದೆ.

■ ಪವಿತ್ರಾ ರಾಘವೇಂದ್ರ ಶೆಟ್ಟಿ

ಪಾರ್ಟಿ ಎಂದಾಕ್ಷಣ ಹೆಂಗಳೆಯರ ಕಣ್ಣು ಅರಳುತ್ತದೆ. ವಾರ್ಡ್‌ರೋಬ್‌ನ ಮೂಲೆ ಮೂಲೆಯನ್ನು ಕೈ ತಡಕಾಡಲು ಶುರುಮಾಡುತ್ತದೆ. ಯಾವ ಡ್ರೆಸ್ ಹಾಕಿಕೊಳ್ಳುವುದು, ಯಾವ ಜುವೆಲ್ಲರಿ ಡ್ರೆಸ್‌ಗೆ ಮ್ಯಾಚ್ ಆಗುತ್ತದೆ ಎಂಬಿತ್ಯಾದಿ ಗೊಂದಲಗಳು ಕಣ್ಣ ಮುಂದೆ ಬರುತ್ತವೆ. ಮದುವೆಗೆ ಸೀರೆ, ಲೆಹೆಂಗಾ ಇತ್ಯಾದಿ ಡ್ರೆಸ್‌ಗಳನ್ನು ಹಾಕಿಕೊಳ್ಳಬಹುದು. ಆದರೆ ಪಾರ್ಟಿ, ಫಂಕ್ಷನ್ ಎಂದಾಕ್ಷಣ ಯಾವ ಡ್ರೆಸ್ ಹಾಕಿಕೊಳ್ಳಲಿ ಎಂಬ ಪ್ರಶ್ನೆ ಮೂಡುತ್ತದೆ. ಅಂದ ಹಾಗೆ, ನಿಮ್ಮೆಲ್ಲಾ ಗೊಂದಲಗಳಿಗೆ ಇಲ್ಲೊಂದಿಷ್ಟು ಪರಿಹಾರವಿದೆ.

ಜಗಮಗಿಸುವ ಪಾರ್ಟಿಯಲ್ಲಿ ನೀವು ಸುರಸುಂದರಿಯ ಹಾಗೆ ಮಿಂಚುಬೇಕು ಎಂದುಕೊಂಡಿದ್ದರೆ, ಈ ರೀತಿಯ ಉಡುಪುಗಳನ್ನು ಆಯ್ಕೆ ಮಾಡಿಕೊಳ್ಳಿ. ಇದರಿಂದ ಪಾರ್ಟಿಯಲ್ಲಿ ಎಲ್ಲರ ಕಣ್ಣು ನಿಮ್ಮ ಮೇಲೆ ಇರುತ್ತದೆ. ಲೇಸ್ ಟಾಪ್ಸ್, ಧೋತಿ ಉಡುಗೆ, ಜಂಪ್‌ಸೂಟ್ ಮುಂತಾದವು ಪಾರ್ಟಿಯಲ್ಲಿ ಸಖತ್ ಆಗಿ ಕಾಣುತ್ತವೆ.

## ಬ್ಲ್ಯಾಕ್ ಡ್ರೆಸ್

ಕಪ್ಪು ಉಡುಪುಗಳನ್ನು ಸಾಮಾನ್ಯವಾಗಿ ಮದುವೆ, ದೇವರ ಪೂಜಾ ಕಾರ್ಯಕ್ರಮ, ಹಬ್ಬಹರಿದಿನಗಳ ಸಮಯದಲ್ಲಿ ಹಾಕಿಕೊಳ್ಳುವುದು ಕಡಿಮೆ. ಆದರೆ ನೈಟ್ ಪಾರ್ಟಿಯ ಸಮಯದಲ್ಲಿ ಈ ಉಡುಪುಗಳು ಸಖತ್ ಆಗಿ ಕಾಣಿಸಿಕೊಳ್ಳುತ್ತವೆ. ಬೇರೆಲ್ಲಾ ಬಣ್ಣದ ಉಡುಪಿಗಿಂತ ಕಪ್ಪು ಬಣ್ಣದ ಡ್ರೆಸ್ ನಿಶೆಗೆ ನಶೆ ಏರುವ ಹಾಗೆ ಮಾಡುವುದಂತೂ ಗ್ಯಾರಂಟಿ! ಕಪ್ಪು ಬಣ್ಣದ ಪಾರ್ಟಿವೇರ್‌ನೊಂದಿಗೆ ನೀವು ಲೈಟ್ ಮೇಕಪ್ ಹಾಗೂ ಕಲರ್‌ಫುಲ್ ಕಿವಿಯೋಲೆ ಹಾಕಿಕೊಂಡರೆ ತುಂಬಾ ಸುಂದರವಾಗಿ ಕಂಗೊಳಿಸಬಹುದು.

## ಶೈನಿ ಸಿಲ್ಕ್ ಟಾಪ್

ಸಾಮಾನ್ಯವಾಗಿ ಸಿಲ್ಕ್ ಸೀರೆಗಳನ್ನು ಮದುವೆಯ ಸಮಯದಲ್ಲಿ ಹಾಕಿಕೊಳ್ಳುತ್ತಾರೆ. ಅದೇ ನೈಟ್ ಪಾರ್ಟಿಗೆ ಜೀನ್ಸ್ ಮೇಲೆ ಶೈನಿ ಸಿಲ್ಕ್ ಟಾಪ್ ಹಾಕಿಕೊಂಡರೆ ಅದರ ಖದರೇ ಬೇರೆ! ಇದು ನಿಮ್ಮ ಲುಕ್ ಅನ್ನು ಮತ್ತಷ್ಟು ಹೆಚ್ಚಿಸುವುದರ ಜೊತೆಗೆ ಪಾರ್ಟಿಯಲ್ಲಿ ನೀವೇ ಹೈಲೈಟ್ ಆಗುತ್ತೀರಿ. ಇದಕ್ಕೆ ಮ್ಯಾಚಿಂಗ್ ಆಗುವ ಆಕ್ಸೆಸರೀಸ್‌ಗಳನ್ನು ಬಳಸಿ, ಮಿತವಾಗಿ ಮೇಕಪ್ ಟಚ್ ಕೊಟ್ಟರೆ ಸುಂದರಿಯಂತೆ ಕಾಣಿಸಿಕೊಳ್ಳಬಹುದು. ಹಾಗೇ ಹೀಲ್ಸ್ ಅಥವಾ ಸ್ನೀಕರ್ಸ್ ಹಾಕಿಕೊಂಡರೆ ಮತ್ತಷ್ಟು ಅಂದವಾಗಿ ಕಾಣಬಹುದು.

## ಚೆಕ್ ಜಂಪ್‌ಸೂಟ್

ಪಾರ್ಟಿಗಳಿಗೆ ಈ ಜಂಪ್ ಸೂಟ್ ಹೇಳಿ ಮಾಡಿಸಿದ್ದು! ಸಾಮಾನ್ಯವಾಗಿ ಪಾರ್ಟಿ ಎಂದಾಕ್ಷಣ ತುಂಬಾ ಆರಾಮದಾಯಕವಾಗಿರುವ ಡ್ರೆಸ್ ಹಾಕಿಕೊಳ್ಳುವುದಕ್ಕೆ ಇಷ್ಟಪಡುತ್ತಾರೆ. ಏಕೆಂದರೆ ಕೆಲವೊಂದು ಸಮಯದಲ್ಲಿ ಪಾರ್ಟಿಯ ಖುಷಿಯನ್ನು ಎಂಜಾಯ್ ಮಾಡುವಾಗ ಕೆಲವರು ಆಟವಾಡುವುದು, ಡ್ಯಾನ್ಸ್ ಮಾಡುವುದು ಮಾಡುತ್ತಿರುತ್ತಾರೆ. ಈ ಸಂದರ್ಭಗಳಿಗೆ ಈ ಜಂಪ್‌ಸೂಟ್‌ಗಳು ಉತ್ತಮ